<u>2ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ. 3260/2018
ಸಿಡಬ್ಲ್ಯೂ .5   ಪಿಡಬ್ಲ್ಯೂ  2

ಸಾಕ್ಷಿಯ ಹೆಸರು - ಆಸಿಫ್ ಅಬ್ದುಲ್‌ಸುತಾರ ಸೌದಾಗರ

ವಯಸ್ಸು - 31 ವರ್ಷ

ಉದ್ಯೋಗ - ಚಾಲಕ

ವಾಸ - ಕೊಣ್ಣೂರು

<u>ದಿನಾಂಕಃ 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

1 ರಿಂದ 6 ನೇ ಆರೋಪಿತರ ಪರಿಚಯವಿದೆ. ಚಾಸಾ 1, 4 ರವರ ಪರಿಚಯ ಇದೆ. ಈ ಪ್ರಕರಣ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲ. ದಿಃ 21.09.2018 ಆರೋಪಿತರು ಚಾಸಾ 1 ರವರ ಮೇಲೆ ಹಲ್ಲೆ ಮಾಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 21-09-2018 ರಂದು ನಾನು ನ್ನನ ಕೆಲಸದ ನಿಮತ್ತ ಗೋಕಾಕಿಗೆ ಬಂದಿದ್ದೆ ಎಂದರೆ ಸರಿಯಲ್ಲ. ನಂತರ ಗೋಕಾಕಿನಲ್ಲಿ ಚಾಸಾ 1 ರವರು ನನಗೆ ಬೇಟಿ ಆದರು ಎಂದರೆ ಸರಿಯಲ್ಲ. ಚಾಸಾ 1 ರವರನ್ನು ಕರೆದುಕೊಂಡು ವಿವೇಕ ರವರ ಕಾರಿನಿಂದ ಕೊಣ್ಣೂರಿಗೆ ಹೋಗುತ್ತದ್ದೆ ಎಂದರೆ ಸರಿಯಲ್ಲ. ಕಾರನ್ನು ನಾನು ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ಕಾರಿನ ಹಿಂಬಾಗ ದಲ್ಲಿ ಚಾಸಾ 1 ರವರು ಕುಳಿತ್ತಿದ್ದರು ಎಂದರೆ ಸರಿಯಲ್ಲ. ನಾವು ಮರಡಿಮಠ ಕ್ರಾಸ್ ದಾಟಿ ಕೊಣ್ಣೂರು ಕಡೆ ಹೋಗುತ್ತಿದ್ದಾಗ ತಪಸಿ ಮಡಿ ಕ್ರಾಸ ಹತ್ತಿರ ಇರುವ ರಾಮಣ್ಣ ಅಡಕಾರ ಸಮೀಪ ಎದುರುಕಡೆಯಿಂದ 1 ರಿಂದ 6 ನೇ ಆರೋಪಿತರು ಬಂದು ನಮ್ಮ ಕಾರನ್ನು

ಅಡ್ಡಗಟ್ಟಿ ಚಾಸಾ 1 ವರಿಗೆ ಹೊರಗೆ ಇಳಿಸಿಕೊಂಡು ಹಳೆಯ ಸಿಟ್ಟಿನಿಂದ 2 ನೇ ಆರೋಪಿತನು ಬಡಿಗೆ ಯಿಂದ ಹಲ್ಲೆ ಮಾಡಿ 1, 3 ರಿಂದ 6 ನೇ ಆರೋಪಿತರು ತನ್ನ ಕೈಯಿಂದ ಚಾಸಾ 1 ರ ಮುಖಕ್ಕೆ , ತಲೆಗೆ ಹಾಗೂ ಬೆನ್ನಗೆ ಹಲ್ಲೆ ಮಾಡಿ ಚಾಸಾ 1 ರ ಶರ್ಟ್ ಎಳೆದಾಡಿದರು ಎಂದರೆ ಸರಿಯಲ್ಲ. ಈ ಘಟನೆ ರಾತ್ರಿ 8.30 ಗಂಟೆಗೆ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 22.09.2018 ಹೇಳಿಕೆಯನ್ನು ಒದಿ ಹೇಳಲಾಗಿ ನಿರಾಕರಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ

<u>2ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ. 3260/2018
ಸಿಡಬ್ಲ್ಯೂ .1 ಪಿಡಬ್ಲ್ಯೂ 1

ಸಾಕ್ಷಿಯ ಹೆಸರು - ಕಲ್ಲೋಳಿ ಈರಪ್ಪ ಗಾಡಿವಡ್ಡರ

ವಯಸ್ಸು - 34 ವರ್ಷ

ಉದ್ಯೋಗ - ಕೂಲಿ

ವಾಸ - ಕೊಣ್ಣೂರು

<u>ದಿನಾಂಕಃ 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

1 ರಿಂದ 6 ನೇ ಆರೋಪಿತರ ಪರಿಚಯವಿದೆ. ಚಾಸಾ 4 ನನ್ನ ತಮ್ಮ ಚಾಸಾ 5 ರವರ ಪರಿಚಯ ಇದೆ. ಈ ಪ್ರಕರಣ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಿಃ 21.09.2018 ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 21-09-2018 ರಂದು ನಾನು ನಮ್ಮೂರಿನಲ್ಲಿ ಮೊಹರಮ್ ಇದ್ದರಿಂದ ಮುಂಜಾನೆ ಗೋಕಾಕಿಗೆ ಬಂದಿದ್ದೆ ಎಂದರೆ ಸರಿಯಲ್ಲ. ನಂತರ ಗೋಕಾಕಿನಿಂದ ಚಾಸಾ 5 ರವರಿಗೆ ಕರೆದುಕೊಂಡು ವಿವೇಕ ರವರ ಕಾರಿನಿಂದ ಕೊಣ್ಣೂರಿಗೆ ಹೋಗುತ್ತದ್ದೆ ಎಂದರೆ ಸರಿಯಲ್ಲ, ಕಾರನ್ನು ಚಾಸಾ 5 ವರರು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಕಾರಿನ ಹಿಂಬಾಗದಲ್ಲಿ ಕುಳಿತ್ತಿದ್ದೆ ಎಂದರೆ ಸರಿಯಲ್ಲ, ನಾವು ಮರಡಿಮಠ ಕ್ರಾಸ್ ದಾಟಿ ಕೊಣ್ಣೂರು ಕಡೆ ಹೋಗುತ್ತಿದ್ದಾಗ ತಪಸಿ ಮಡಿ ಕ್ರಾಸ ಹತ್ತಿರ ಇರುವ ರಾಮಣ್ಣ ಅಡಕಾರ ಸಮೀಪ

ಎದುರುಕಡೆಯಿಂದ 1 ರಿಂದ 6 ನೇ ಆರೋಪಿತರು ಬಂದು ನಮ್ಮ ಕಾರನ್ನು ಅಡ್ಡಗಟ್ಟಿ ನನಗೆ ಹೊರಗೆ ಇಳಿಸಿಕೊಂಡು ಹಳೆಯ ಸಿಟ್ಟಿನಿಂದ 2 ನೇ ಆರೋಪಿತನು ಬಡಿಗೆ ಯಿಂದ ಹಲ್ಲೆ ಮಾಡಿ 1, 3 ರಿಂದ 6 ನೇ ಆರೋಪಿತರು ತನ್ನ ಕೈಯಿಂದ ನನ್ನ ಮುಖಕ್ಕೆ , ತಲೆಗೆ ಹಾಗೂ ಬೆನ್ನಗೆ ಹಲ್ಲೆ ಮಾಡಿ ನನ್ನ ಶರ್ಟ್ ಎಳೆದಾಡಿದರು ಎಂದರೆ ಸರಿಯಲ್ಲ. ಈ ಘಟನೆ ರಾತ್ರಿ 8.30 ಗಂಟೆಗೆ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 27.09.2018 ಹೇಳಿಕೆಯನ್ನು ಒದಿ ಹೇಳಲಾಗಿ ನಿರಾಕರಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ